ಒಂದು ರಾತ್ರಿ ಇಂತಹ ಹೊಡೆತದ ಕ್ಷಣದಲ್ಲಿ ಶೆಡ್ಡಿನ ಮುಂಭಾಗದಲ್ಲಿ ನೆಲದ ಮೇಲೆ ಬಿದ್ದಿದ್ದ ಮಾದೇವಿ ತನ್ನ ಮೇಲೆ ಕಲ್ಲೆತ್ತಿ ಹಾಕಲು ಬಂದ ತಿಪ್ಪೇಶನ ಕಾಲು ಹಿಡಿದು ಬಲವಾಗಿ ಎಳೆದಿದ್ದಳು. ಕಲ್ಲು ಸಮೇತ ಅಂಗಾತ ಬಿದ್ದವನ ತಲೆ ಅರೆಯುವ ಕಲ್ಲಿಗೆ ಬಡಿದಿತ್ತು. ಏನಾಗಿದೆಯೆಂದು ಅರ್ಥವಾಗಿರದಿದ್ದ ಮಾದೇವಿ ರೋಷದಿಂದ ಕೈಗೆ ಸಿಕ್ಕಿದ್ದರಲ್ಲಿ ಬಡಿದಿದ್ದಳು. ತಿಪ್ಪೇಶ ಗೊಟಕ್ ಅಂದಿದ್ದು ಅವಳ ಏಟಿನಿಂದಲೋ... ಕಲ್ಲೇಟಿನಿಂದಲೋ... ಇನ್ನೇನು ಕೊಲೆ ಆಪಾದನೆಗೆ ಬಲಿಯಾಗುತ್ತಿದ್ದಳು ಮಾದೇವಿ. ಶೆಡ್ಡಿನೊಳಗೆ ಭಯದಿಂದ ಅವಿತುಕೊಂಡಿದ್ದ ಎಲಿಮೆಂಟ್ರಿ ಓದುತ್ತಿದ್ದ ಮಾದೇಶ ತಾಯಿಯ ರೋದನ ಕೇಳಿ ಓಡಿ ಬಂದವನು ಅವಳನ್ನಪ್ಪಿಕೊಂಡು ಅಳಲಾರಂಭಿಸಿದ್ದ. ಅದೇ ಹೊತ್ತಿಗೆ ದಿನವೂ ಅದೇ ಬೀದಿಯಲ್ಲಿ ಓಡಾಡುವ ಪೊಲೀಸ ನಾಗೇಶಪ್ಪ ಆ ದಾರಿಯಾಗಿ ಬರುತ್ತಿದ್ದವನು ಘಟನೆಗೆ ಸಾಕ್ಷಿಯಾಗಿಬಿಟ್ಟಿದ್ದ. ಸೇರಲಾರಂಭಿಸಿದ್ದ ಜನ ತೀರ್ಮಾನಕ್ಕೆ ಬರುವ ಮೊದಲೇ ಆತ ತೀರ್ಪು ಕೊಟ್ಟು ಮಾದೇವಿಯನ್ನು ಬಚಾವ್ ಮಾಡಿದ್ದ. ಸ್ಟೇಷನ್ನಿನಲ್ಲಿ ತಿಪ್ಪೇಶ ಕುಡಿದ ಅಮಲಿನಲ್ಲಿ ಕಲ್ಲೆತ್ತಿ ಹಾಕಲು ಹೋದವನು ಆಯ ತಪ್ಪಿ ಅಂಗಾತ ಬಿದ್ದು ತಲೆ ಕಲ್ಲಿಗೆ ಬಡಿದು ಸತ್ತಿದ್ದೆಂದು ದಾಖಲಾಯ್ತು. ಇದೆಲ್ಲ ಸುಖಾಂತ್ಯವಾಗುವ ಹೊತ್ತಿಗೆ ಪೊಲೀಸನಿಗೂ ಮಾದೇವಿಗೂ ನಡುವೆ ಒಂದು ಆತ್ಮೀಯತೆ ಹುಟ್ಟಿಕೊಂಡಿತ್ತು. ಆ ದಾರಿಯಾಗಿ ಆತ ಹೋಗುವಾಗ ಇಬ್ಬರೂ ಒಂದೆರಡು ಮಾತಾಡುತ್ತಿದ್ದರು. ನಾಗೇಶಪ್ಪ ಮಾದೇಶನಿಗೆ ಅವನ ತಾಯಿ ಅವನಿಗಾಗಿ ಕಷ್ಟ ಪಡುತ್ತಿರುವುದನ್ನು ಹೇಳಿ ಶಾಲೆಗೆ ಹೋಗಿ ಚೆನ್ನಾಗಿ ಕಲಿತು ಒಳ್ಳೆಯ ಕೆಲಸಕ್ಕೆ ಸೇರಪ್ಪ ಎಂದು ಹಿತವಚನವನ್ನೂ ಹೇಳುತ್ತಿದ್ದ. ನಿಧಾನವಾಗಿ ಅವರಿಬ್ಬರ ಸ್ನೇಹ ಪೊಲೀಸಪ್ಪ ಮಾದೇವಿಯ ಶೆಡ್ಡಿನೊಳಗೆ ಹೊಕ್ಕು ಚಾ ಕುಡಿಯುವಷ್ಟು ವಿಸ್ತರಿಸಿಕೊಂಡಿತ್ತು.

ಈ ನಡುವೆ ತಿಪ್ಪೇಶನ ಮೇಸ್ತ್ರಿ ಯಲ್ಲಾ ಜೋಸೆಫ್ ಅರ್ಥಾತ್ ಯಲ್ಲಾರೆಡ್ಡಿ ಮಾದೇವಿಯನ್ನು ಗಾರೆ ಕೆಲಸಕ್ಕೆ ಬಾ ಎಂದು ಕರೆಯಲು ಅವರ ಶೆಡ್ಡಿನತ್ತ ಆಗಾಗ ಸುಳಿಯಲಾರಂಭಿಸಿದ್ದ. ತಿಪ್ಪೇಶ ಬದುಕಿದ್ದಾಗಲೂ ಅವಳನ್ನು ಗಾರೆ ಕೆಲಸಕ್ಕೆ ಕರೆದಿದ್ದ ಯಲ್ಲಾರೆಡ್ಡಿ. ಆದರೆ, ಮಾದೇವಿಗೆ ಅವಳ ಸ್ವಂತ ದುಡಿಮೆಯ ಬಗ್ಗೆ ಪ್ರೀತಿ ಜಾಸ್ತಿಯಿತ್ತು. ಈಗ ತಿಪ್ಪೇಶ ಸತ್ತ ಮೇಲೆ ಅವಳು ದುಡಿದ ದುಡ್ಡು ಮಗನ ಹೊಟ್ಟೆಯನ್ನೂ, ಅವಳ ಹೊಟ್ಟೆಯನ್ನೂ ತಣ್ಣಗಾಗಿಸಿ ಶೆಡ್ ಹಾಕಿಕೊಳ್ಳಲು ಒಪ್ಪಿದ ಸೈಟ್ ಓನರಿಗೆ ಸಲ್ಲಿಸಬೇಕಾದ ಬಾಡಿಗೆಗೂ ಸರಿದೂಗುತ್ತಿತ್ತು. ಯಲ್ಲಾರೆಡ್ಡಿ ಮಾದೇವಿಯನ್ನು ಕೂಲಿಗೆ ಕರೆಯಲು ಅತ್ತ ಸುಳಿವಾಗಲೆಲ್ಲ ಮಾದೇಶನಿಗಾಗಿ ಪೆಪ್ಪರಮೆಂಟೂ ತರುತ್ತಿದ್ದ. ಒಂದು ದಿನ ಮಾದನ ತಲೆ ಸವರುತ್ತ, "ತಂದೆ ಕಳಕೊಂಡು ತಬ್ಬಲಿಯಾದೆಯಲ್ಲೋ ಮಾದ... ಕುಡಿಲಿಲ್ಲ ಅಂದ್ರ ದೇವರಂತವ್ನೋ ನಿನ್ನಪ್ಪ. ಅವ್ನಿಗೆ ಏಸಪ್ಪನ ಪ್ರಾರ್ಥನೆ ಮಾಡು ಕುಡಿತ ಬಿಟ್ಟೋಗ್ತದೆ... ಹೊಟ್ಟೆನೋವು ವಾಸಿಯಾಗ್ತದೆ ಅಂದಿದ್ದೆ. ಅವ್ನೂ ಒಪ್ಪಿದ್ದ. ಅಷ್ಟರೊಳಗೆ ನಿನ್ನವ್ವ ಹಿಂಗ್ಮಾಡ್ಬುಟ್ಲು ಕಣ್ಲಾ ಮಾದ" ಅಂದುಬಿಟ್ಟಿದ್ದ. ಮಾದೇವಿಯ ಕಿವಿ ಮೇಲೆ ಆ ಮಾತು ಬಿದ್ದು ಏನ್ಲಾ ಅಂದೆ... ಅನ್ನುತ್ತ ಸೆರಗು ಬಿಗಿದು ಯಲ್ಲಾರೆಡ್ಡಿಯ ಎದುರು ನಿಂತಿದ್ದಳು. ಯಲ್ಲಾರೆಡ್ಡಿ ಜನ ಏನೋ ಅಂತಿದ್ರು. ಅದ್ಕೇ... ಎಂದು ರಾಗವೆಳೆದು ಮಾದೇಶನ ತಲೆ ಸವರಿ ಅವನ ಕೈಯೊಳಗೆ ಪೆಪ್ಪರಮೆಂಟು ತುರುಕಿ ಜಾರಿಕೊಂಡಿದ್ದ. ಮಾದೇವಿ ಸಿಟ್ಟಿನಿಂದ ಮಗನ ಕೈಯಲ್ಲಿದ್ದ ಪೆಪ್ಪರಮೆಂಟು ಕಿತ್ತೊಗೆದಿದ್ದಳು. ಆದರೆ ತಾಯಿಯ ಕಣ್ಣು ತಪ್ಪಿಸಿ ಆಕೆ ಒಗೆದಲ್ಲಿಂದ ಮಾದೇಶ ಮಿಠಾಯಿ ಹುಡುಕಿ ತೆಗೆದು ಚೀಪಿದ್ದ.

ಚಿಕ್ಕೆಟ್ಟಳ್ಳಿ ಸರಕಾರಿ ಶಾಲೆಯಲ್ಲಿ ಎಂಟನೆ ತರಗತಿ ಕಲಿಯುತ್ತಿದ್ದ ಮಾದೇಶನ ಮೇಲೆ ಮೇಸ್ತ್ರಿ ಯಲ್ಲಾರೆಡ್ಡಿ ಉರುಫ್ ಯಲ್ಲಾಜೋಸೆಫನಿಗೆ ಕಣ್ಣಿದ್ದಂತೆ ಮಾದೇಶನಿಗೂ ಯಲ್ಲಾರೆಡ್ಡಿಯ ಹಳೇ ಯಜ್ಡಿ ಬೈಕಿನ ಹಿಂದಿನ ಸೀಟಿನ ಮೇಲೆ ಕಾಯಂ ಆಗಿ ಕುಳಿತುಕೊಳ್ಳುವ ಆಸೆ ದಿನದಿಂದ ದಿನಕ್ಕೆ ಜಾಸ್ತಿಯಾಗುತ್ತಿತು. ಇಸ್ಕೂಲ್ ಓದು ಸಾಕೆನಿಸುತ್ತಿತ್ತು. ಮಾದೇವಿ ಮಾತ್ರ ದಿನಾ ಬೆಳಗ್ಗೆ